## ಕಾಡಿಗೆ ಕಣ್ಣು

ಅರುಣ್ ರಾಜ್‌ಗೆ ಕಾಡಿನ ಓಟಾಟ, ಒಡನಾಟ ಹೊಸದೇನಲ್ಲ. ನಮ್ಮೆಲ್ಲರಿಗಿಂತ ಹತ್ತುಪಟ್ಟು ಬೆಟ್ಟಗುಡ್ಡ, ಕಣಿವೆ, ಕಾನನಗಳಲ್ಲಿ ಅಲೆದಾಡಿದ್ದಾರೆ. ನಿಗೂಢ ಜಲಪಾತಗಳ ಹುಡುಕಿ ಅವುಗಳ ಸೊಬಗನ್ನು ಅರೆದು ಕುಡಿದ್ದಾರೆ. ನನ್ನ ಪ್ರಕಾರ ಅವರೊಬ್ಬ ನಿಷ್ಠಾವಂತ ಚಾರಣಿಗ. ಸುಲಭವಾಗಿ ಎಲ್ಲರೊಂದಿಗೂ ಹೊಂದಿಕೊಳ್ಳಬಲ್ಲ ಹಿತಮಿತ ಮನುಷ್ಯ. ಕ್ಯಾಮೆರಾ ಕಣ್ಣಿಂದ ಪಕ್ಷಿಗಳ ನೋಡುವ, ಕಾದು ಪಟ ತೆಗೆಯುವ ನಮ್ಮ ತಲಬಿಗೆ ಮಾತ್ರ ಹೊಸ ಪರಿಚಯ. ನಾನು ಅವರಿಗೆ ಕಡ್ಡಿಗೆ ಜೀವ ಬರುವ ಕಥೆ ಹೇಳಿದ್ದು ತಮಾಷೆಗಲ್ಲ. ನಿಜವಾಗಿಯೂ ಈಗ ನಡೆಯುವಂಥದ್ದು. ನಮ್ಮ ಅನುಭವಲೋಕಕ್ಕೆ ಇನ್ನೂ ಸ್ಪರ್ಶವಾಗದ ವಸ್ತು, ವಿಷಯಗಳ ಬಗ್ಗೆ ನಮಗೊಂದು ಸಣ್ಣ ಗುಮಾನಿ ಇದ್ದೇ ಇರುತ್ತದೆ. ಇದು ಇರಬೇಕು ಕೂಡ. ನಾವು ಸುಳ್ಳು ಎಂದು ಭಾವಿಸಿದ ಸಂಗತಿ ದಿಟವಾದಾಗ ಉಂಟಾಗುವ ಸಂತೋಷ ಹೆಚ್ಚು ದಿನ ಮನಸ್ಸಿನಲ್ಲಿ ಉಳಿಯುತ್ತದೆ. ಅಂದುಕೊಂಡಿದ್ದಕ್ಕಿಂತ ವ್ಯತಿರಿಕ್ತವಾಗಿ ನಡೆಯುವ ಘಟನೆಗಳು ಹೆಚ್ಚು ಇಷ್ಟವಾಗುತ್ತವೆ. ಹುಚ್ಚು ದುಸ್ಸಾಹಸಗಳ ಮೂಲಕ ಹೊಸ ಅನುಭವ ಗಳಿಸುವ ದಾರಿಯ ಹೆಸರೇ ಫೋಟೊಗ್ರಫಿ. ಕೂತಲ್ಲೇ ಕೆಡುಕು, ಅನಾಹುತಗಳನ್ನು ಕಲ್ಪಿಸಿಕೊಂಡು ನಡುಗುವ ಜನ ಪಟಪ್ರಪಂಚದಲ್ಲಿ ಹೆಚ್ಚು ದಿನ ಮುಂದುವರೆಯಲಾರರು.

ಪಟ ತೆಗೆಯಲು ಹೋಗುವ ಪ್ರತಿ ಜಾಗೆಗಳು ನಮಗೆ ಹೊಸ ಸವಾಲು ಕೊಡುತ್ತವೆ. ಹೆಚ್ಚು ಅಪರಿಚಿತವೂ, ಅಡಚಣೆಯೂ ಆಗಬಲ್ಲ ಕಾಡಿನ ದಾರಿಗಳು ಅನೇಕ ತಾಪತ್ರಯಗಳ ತವರುಮನೆ ಇದ್ದಂತೆ. ಪ್ರತಿ ಕಿರಿಕಿರಿಯನ್ನೂ ಪರಮ ಸುಖವೆಂದು ಸವಿಯುವ ತಾಳ್ಮೆ ಇದ್ದವರಷ್ಟೇ ಉತ್ತಮ ಪಟಗಾರನಾಗಲು ಸಾಧ್ಯ. 'ಎನ್ರೀ ನಮ್ಮ ಮನೆಗಳ ಮೇಲೆ ಕಾಲಿಟ್ಟಿದ್ದೀರಿ. ನಿಮಗೆ ಮಾಡ್ತೀವಿ ಇರಿ ಹಬ್ಬ' ಎಂದು ಸಿಡಿದು ಎಗರುವ ಕೆಂಚಗ, ಕೆಂಪಿರುವೆ, ಗೊದ್ದಗಳು, ಝುರಿ, ಚೇಳು, ಜೇನ್ನೊಣಗಳ ದಾಳಿಯನ್ನೂ ಒಪ್ಪಿಕೊಳ್ಳಬೇಕು. ಕೆಲವೊಮ್ಮೆ ಹಾವುಗಳು ನುಸುಳಿ ಬಂದು ಫಜೀತಿ ಎಬ್ಬಿಸಿದ ಉದಾಹರಣೆಗಳುಂಟು. ದೂಸರಾ ಮಾತಾಡದೆ ಹೋದ ತಾವಿನಲ್ಲಿ ತೆಪ್ಪಗೆ ಹೊಂದಿಕೊಳ್ಳುವ ವಿನಯ ನಮ್ಮಲ್ಲಿರಬೇಕು. ಸ್ಥಳ, ಸನ್ನಿವೇಶ, ವ್ಯವಸ್ಥೆ ಯಾವುವೂ ಅಲ್ಲಿ ನಮ್ಮಿಚ್ಛೆಯಂತೆ ಇರುವುದೇ ಇಲ್ಲ. ತರಚುವ ಮುಳ್ಳು, ಕಚ್ಚುವ ಲೀಚು, ಎರಚಲು ಮಳೆ, ಎಡವುವ ಕಲ್ಲು, ಜಾರುವ ಕೆಸರು ಎಲ್ಲವನ್ನೂ ನಗುನಗುತ್ತಾ ಸ್ವೀಕರಿಸಬೇಕು. ಕಿಂಚಿತ್ತೂ, ಕಷ್ಟ ಇಷ್ಟಪಡದ ಸುಕೋಮಲ ಸಾತ್ವಿಕರಿಗೆ ಫೋಟೊಗ್ರಫಿ ಆಗಿ ಬರುವುದಿಲ್ಲ.

ಇಲ್ಲೂ ಕೂಡ ನಮ್ಮ ಇರುವಿಕೆ ಹಕ್ಕಿಗೆ ತಿಳಿಯದಂತೆ ಅಡ್ಡಲೊಂದು ಹಸಿರು ಬಟ್ಟೆ ಕಟ್ಟಿದ್ದಾರೆ. ನಾವೆಲ್ಲಾ ಆ ಕತ್ತರಿಸಿದ ಬಟ್ಟೆಗೆ ಕಳ್ಳ ಕಿಂಡಿ ಕೊರೆದು ನಮ್ಮ ಕ್ಯಾಮೆರಾ ಮೂತಿಗಳನ್ನು ಹೊರ ಹಾಕಿದ್ದೇವೆ. ಇದೊಂದು ದಟ್ಟ ಕಾಡ ನಡುವೆ ಸಿಲುಕಿರುವ ಅಡಿಕೆ ತೋಟ. ನಮ್ಮ ಗಮನವೆಲ್ಲಾ ಈಗ ಹದಿನೈದಡಿ ದೂರದ ಹಸಿರು ಪಾಚಿ ಕಡ್ಡಿಯ ಮೇಲಿದೆ. ಆಗಾಗ ಬೆಳಕು, ಮತ್ತು ಫೋಕಸ್ ಸರಿ ಇದೆಯೇ ಎಂದು ಒಂದು ಚಿತ್ರ ಕ್ಲಿಕ್ಕಿಸಿಕೊಂಡು ಖಚಿತ ಮಾಡಿಕೊಳ್ಳುತ್ತಿದ್ದೇವೆ. ಬೆಳಕು ತುಂಬಾ ಹೋಗಿಬಂದು ಕಣ್ಣಾಮುಚ್ಚಾಲೆ ಆಡುತ್ತಿದೆ. ಮಳೆಗಾಲದಲ್ಲಿ ಇದು ಸಹಜ ಕೂಡ. ಯಾವ ಗಳಿಗೆಯಲ್ಲಾದರೂ ಪಟ್ಟೆಂದು ಬಣ್ಣದ ಮಿಂಚುಳ್ಳಿ ಹಾರಿ ಬರಬಹುದು. ಅದು ಪಕ್ಕನೆ ಬಂದು ಕಡ್ಡಿ ಮೇಲೆ ಪ್ರತ್ಯಕ್ಷವಾಗುವ ಆ ಗಳಿಗೆಯನ್ನೇ ನಾನು ಕಡ್ಡಿಗೆ ಜೀವ ಬರುವುದು ಎಂದು ಹೇಳಿದ್ದು.

ಹೆಬ್ಬೆಟ್ಟು ಅಗಲದ ಹಮ್ಮಿಂಗ್ ಬರ್ಡ್ ಎಂಬ ಹಕ್ಕಿಯೊಂದು ಅಮೆರಿಕದಲ್ಲಿದೆ. ಒಮ್ಮೆ ಅದರ ರೆಕ್ಕೆ ಬಡಿತ, ಮತ್ತದರ ಹೃದಯದ ಬಡಿತ ವೇಗವನ್ನು ಲೆಕ್ಕ ಮಾಡ ಹೊರಟರೆ ನಮ್ಮ ತಲೆ ಗಿರ್ ಎನ್ನುತ್ತದೆ. ಒಂದು ಸಣ್ಣ ಪಕ್ಷಿಯಲ್ಲಿರುವ ಇಂತಹ ವಿಸ್ಮಯಗಳನ್ನು ಗಮನಿಸಿದರೆ, ಮನುಷ್ಯ ತನ್ನನ್ನೇ ತಾನು ಶ್ರೇಷ್ಠ ಮತ್ತು ಬಲಿಷ್ಠ ಎಂದು ಭಾವಿಸುವುದು ವಿಚಿತ್ರವೆನಿಸುತ್ತದೆ. ಈಗ ಹಾರಿ ಬರಲಿರುವ ಮೂರು ಬೆರಳಿನ ಮಿಂಚುಳ್ಳಿಯ ಅಂದಾಜಿಗೇ ನಿಲುಕದ್ದು.

